[ Govt. of Karnataka C.R.P. 67]

Deposition Sheets (RP.No.57) Form No.4

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 1062/2014**

ಪಿ.ಡಬ್ಲ್ಯು : 1 ಸಿ.ಡಬ್ಲ್ಯು : 2

ಸಾಕ್ಷಿದಾರಳ ಹೆಸರು : ಜ್ಯೋತಿ
ಗಂಡನ ಹೆಸರು : ಜಗದೀಶ್
ಪ್ರಾಯ : 40 ವರ್ಷ
ಉದ್ಯೋಗ : ಖಾಸಗಿ
ವಾಸ : ಬಾರಾಡಿ ಕಾಂತಾವರ

ದಿನಾಂಕ 07.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ಚಾಸಾ-1 ನನ್ನ ಅಜ್ಜಿ ಚಾಸಾ-3 ನನ್ನ ಮಾವ. ಆರೋಪಿಯನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ. ಅರೋಪಿಯನ್ನು ಒಮ್ಮೆ ಪೊಲೀಸ್ ಠಾಣೆಯಲ್ಲಿ ಪೊಲೀಸರು ತೋರಿಸಿರುತ್ತಾರೆ.

ದಿನಾಂಕ 16.09.2011 ರಂದು ನಾನು ಮತ್ತು ಚಾಸಾ-1 ಸಾಣೂರಿನ ಮಾವ ಸದಾನಂದ ಎಂಬವರ ಮನೆಗೆ ಹೋಗಿ ಅಲ್ಲಿಂದ ಮರಳಿ ಬರುತ್ತಿರುವಾಗ ಸಂಜೆ ಸುಮಾರು 4 ಗಂಟೆಗೆ ಬಾರಾಡಿ ಕಂಬಳದಿಂದ ಡಾಂಬರು ರಸ್ತೆಯ ಮೂಲಕ ಒಂದು ಬಿಳಿ ಬಣ್ಣದ ದ್ವಿಚಕ್ರ ವಾಹನ ನಮ್ಮ ಎದುರಿನಿಂದ ಬಂದು ಪರಪ್ಪಾಡಿ ಕಡೆಗೆ ಹೋಯಿತು. ಸದರಿ ವಾಹನದ ಮೇಲೆ 2 ಜನ ವ್ಯಕ್ತಿಗಳಿದ್ದರು. ಸದರಿ ದ್ವಿಚಕ್ರ ವಾಹದ ಸವಾರರು ಪುನಃ ಪರಪ್ಪಾಡಿ ಕಡೆಯಿಂದ ಬಂದು ನಮ್ಮ ಹತ್ತಿರ ವಾಹನ ನಿಲ್ಲಿಸಿ ಸಾಣೂರಿಗೆ ಹೋಗುವ ದಾರಿ ಯಾವುದು ಎಂದು ನನ್ನ ಅಜ್ಜಿ ಚಾಸಾ-1 ಇವರ ಬಳಿ ಕೇಳಿದರು. ಚಾಸಾ-1 ಆಗ ಅವರಿಗೆ ಸಾಣೂರಿನ ಮಾರ್ಗ ಹೇಳಿದರು. ಅಷ್ಟರಲ್ಲಿ ಸದರಿ ದ್ವಿಚಕ್ರದ ಹಿಂಬದಿಯ ಸವಾರ ದ್ವಿಚಕ್ರ ವಾಹನದಿಂದ ಇಳಿದು ಚಾಸಾ-1 ನನ್ನ ಅಜ್ಜಿಯ ಬಳಿ ಬಂದು ಅವಳ ಕುತ್ತಿಗೆಯಲ್ಲಿಯ ಚಿನ್ನದ ಡಿಸ್ಕೋ ಚೈನನ್ನು ಎಳೆದುಕೊಂಡು ಅವರನ್ನು ದೂಡಿದನು. ಚಾಸಾ-1 ನನ್ನ ಅಜ್ಜಿ ನೆಲಕ್ಕೆ ಬಿದ್ದರು. ಆಗ ಸದರಿ ವ್ಯಕ್ತಿ ಅಜ್ಜಿಯ ಚೈನನ್ನು ಹಿಡಿದುಕೊಂಡು ದ್ವಿಚಕ್ರ ವಾಹನದ ಮೇಲೆ ಕುಳಿತು ಚಿಲಿಂಬಿ ಕಡೆಗೆ ಹೋದರು. ನಾವು ಆಗ ಬೊಬ್ಬೆ ಹಾಕಿರುತ್ತೇವೆ. ಸದರಿ ಸಮಯದಲ್ಲಿ ಸದರಿ ವ್ಯಕ್ತಿಗಳು ತಗೆದುಕೊಂಡು

ಬಂದಿದ್ದ ದ್ವಿಚಕ್ರ ವಾಹನದ ನಂಬ್ರ ನೋಡಿರುತ್ತೇನೆ. ಅದರ ನಂಬ್ರ ಈಗ ನೆನಪಿಲ್ಲ. ಅಲ್ಲಿಂದ ನಾನು ಮತ್ತು ಚಾಸಾ- 1 ನಮ್ಮ ಮನೆಗೆ ಹೋಗಿ ಚಾಸಾ-3 ಇವರಿಗೆ ಘಟನೆ ತಿಳಿಸಿರುತ್ತೇವೆ. ನಂತರ ದಿನಾಂಕ 20.09.2011 ರಂದು ಘಟನೆಯ ಕುರಿತು ನಾನು ಚಾಸಾ-3 ಚಾಸಾ-1 ಸೇರಿ ಠಾಣೆಗೆ ಹೋಗಿ ದೂರು ನೀಡಿರುತ್ತೇವೆ.

ದಿನಾಂಕ 22.09.2011 ರಂದು ಹೆಬ್ರಿ ಪೊಲೀಸರು ನಾವು ಹೇಳಿದ ಮುಖ ಚಹರೆಯ ಒಬ್ಬ ವ್ಯಕ್ತಿ ಸಿಕ್ಕ ಬಗ್ಗೆ ಮಾಹಿತಿ ನೀಡಿದ್ದು ನಮ್ಮನ್ನು ಠಾಣೆಗೆ ಕರೆಸಿದ್ದರು. ನಾನು ಮತ್ತು ಚಾಸಾ-1 ಹೆಬ್ರಿ ಠಾಣೆಗೆ ಹೋಗಿದ್ದಾಗ ಘಟನೆಯ ದಿನ ದ್ವಿಚಕ್ರ ವಾಹನವನ್ನು ನಡೆಸುತ್ತಿದ್ದ ವ್ಯಕ್ತಿಯನ್ನು ಮತ್ತು ನನ್ನ ಅಜ್ಜಿಯ ಕೊರಳಲ್ಲಿಯ ಚೈನನ್ನು ನಮಗೆ ತೋರಿಸಿರುತ್ತಾರೆ. ನಾವು ಸದರಿ ವ್ಯಕ್ತಿಯನ್ನು ಮತ್ತು ಚೈನನ್ನು ನೋಡಿ ಗುರುತಿಸಿರುತ್ತೇವೆ. ಅದೇ ರೀತಿ ಠಾಣೆಯಲ್ಲಿದ್ದ ಒಂದು ಕೆಂಪು ಮತ್ತು ಕಪ್ಪು ಬಣ್ಣದ ಒಂದು ಹೆಲ್ಮೆಟ್ ನ್ನು ಸಹ ನಾವು ನೋಡಿ ಗುರುತಿಸಿರುತ್ತೇವೆ.

ಸಾಕ್ಷಿಯು ಒಂದು ಚಿನ್ನದ ಚೈನು ತೋರಿಸಿ, ನನ್ನ ಅಜ್ಜಿಯ ಕೊರಳಿಂದ ಕಿತ್ತುಕೊಂಡು ಹೋದ ಚೈನು ಆಗಿರುತ್ತದೆ ಎಂದು ತಿಳಿಸಿರುತ್ತಾರೆ. ಅದನ್ನು ಮು ಮಾ- 1 ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರಿದು ಸದರಿ ಚೈನನ್ನು ನ್ಯಾಯಾಲಯದ ಆದೇಶದಂತೆ ಬಿಡಿಸಿಕೊಂಡಿರುತ್ತೇನೆ ಎಂದು ನುಡಿದಿರುತ್ತಾರೆ. ಹೆಲ್ಮೆಟನ್ನು ನೋಡಿದರೆ ಗುರುತಿಸುತ್ತೇನೆ.

ಅದೇ ರೀತಿ ಘಟನೆಯ ದಿನ 1 ನೇ ಅರೋಪಿಯ ಎಡಗೈಯಲ್ಲಿದ್ದ ಹೆಲ್ಮೆಟ್ ನ್ನು ಈಗ ನೋಡುತ್ತಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ಮು ಮಾ-2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ರವರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು)

<u>ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರುಃ-</u>

ದಿಃ31.01.2012 ರಂದು ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಿಂದ ನಿಮಗೆ ಕರೆ ಮಾಡಿ ನೀವು ಹಾಗೂ ಚಾಸಾ-1 ರವರು ಗುರುತು ಚಹರೆ ಹೇಳಿದ ಇನ್ನೊಬ್ಬ ವ್ಯಕ್ತಿಯು ಠಾಣೆಯಲ್ಲಿದ್ದು ಗುರುತಿಸಲು ಕರೆಯಿಸಿದಂತೆ ನೀವು ಮತ್ತು ಚಾಸಾ-1 ಠಾಣೆಗೆ ಹೋಗಿರುತ್ತೀರಿ ಎಂದರೆ ಹೋಗಿರಬಹುದು. ಆ ಸಮಯದಲ್ಲಿ ಪೊಲೀಸರು ತಮ್ಮ

ವಶದಲ್ಲಿದ್ದ 1 ನೇ ಅರೋಪಿಯನ್ನು ತೋರಿಸಿ ಇದೇ ವ್ಯಕ್ತಿ ನನ್ನ ಅಜ್ಜಿಯ ಕೊರಳಲ್ಲಿಯ ಚೈನನ್ನು ಕಿತ್ತು ಕೊಂಡು ಹೋದ ವ್ಯಕ್ತಿಯಾಗಿದ್ದ. ಅವನ ಹೆಸರು ರಾಜೇಂದ್ರ ಶೆಟ್ಟಿ ಎಂದು ಪೊಲೀಸರು ತಿಳಿಸಿರುತ್ತಾರೆ ಎಂದರೆ ತಿಳಿಸಿರಬಹುದು ಎಂದುನುಡಿಯುತ್ತಾರೆ. ಈ ಬಗ್ಗೆ ದಿಃ31.01.2012 ರಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲು ಃ 1 ನೇ ಆರೋಪಿ ಪರ ಃಶ್ರೀ ಹೆಚ್ ಆರ್ ಕೆ ವಕೀಲರಿಂದಃ

ನಾನು ದಿಃ16.09.2011 ರಂದು ಘಟನೆ ಆಗಿದೆ ಎಂದು ಹೇಳುವ ದಿನ ಪಿರ್ಯಾದಿಯನ್ನು ನೀಡಿರುವುದಿಲ್ಲ, 4 ದಿನ ತಡವಾಗಿ ಪಿರ್ಯಾದು ನೀಡಿರುತ್ತೇನೆ ಎಂದರೆ ಸರಿ. ದೂರನ್ನು ಎಲ್ಲಿ ಬೆರಳಚ್ಚು ಮಾಡಿಸಿರುತ್ತೀರಿ ಎಂದು ನೆನಪಿಲ್ಲ. ನಮ್ಮ ದೂರಿನಲ್ಲಿ ವಾಹನದ ಗುರುತು, ಆರೋಪಿಯ ಗುರುತು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಘಟನೆ ನಡೆದಿದೆ ಎಂದು ಹೇಳುವ ದಿನ ಆರೋಪಿಯ ಚಹರೆಯನ್ನು ನಿಖರವಾಗಿ ನೋಡಿರುವುದಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ವಿಚಾರಗಳು ಪೊಲೀಸರು ಹೇಳಿದ್ದರಿಂದ ತಿಳಿದಿರುತ್ತದೆ. ನಾವು ಚೆನ್ನವನ್ನು ನೋಡುವಾಗ ಪೊಲೀಸರ ಸುಪರ್ದಿಯಲ್ಲಿ ಇತ್ತು. 1 ನೇ ಆರೋಪಿಗೂ ಈ ಘಟನೆಗೂ ಯಾವುದೇ ಸಂಬಂಧ ಇಲ್ಲ ಎಂದರೆ ಇರಬಹುದು ಎಂದು ನುಡಿಯುತ್ತಾರೆ.

ಮರುವಿಚಾರಣೆ: ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ